F. FERNANDES.—You have stated that 12 been given to the Coondapur Constituency. It is have been allotted. May I know whether all ... under A. R. C. Scheme ?

Sri H. C. LINGA REDDY.—It all depends upon the number of trainees. It is quite possible there may be trainees from other Taluks to whom boats were allotted. It depends upon the allotment made.

ಶ್ರೀ ಎಸ್. ಏ. ಅಗ್ನಿಹೋತ್ರಿ.—ಜಯಪ್ರಕಾಶ ನಾರಾಯಣರವರ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದರು, ನನಗೆ ಚೆನ್ನಾಗಿ ತಿಳಿಯಲಿಲ್ಲ. ತಾವು ಮಾನ್ಯ ಮಂತ್ರಿಗಳಾದಮೇಲೆ ಕಾಂಗ್ರೆಸ್‌ನವರು ಹೆಚ್ಚು ಮಾನು ಹಿಡಿದಿದ್ದಾಗೋ ? ಅಪೋಸಿಷನ್‌ನವರು ಹೆಚ್ಚು ಮಾನು ಹಿಡಿದಿದ್ದಾರೋ ! ದಯಮಾಡಿ ಹೇಳಬೇಕು.

(ನಭೆಯಲ್ಲಿ ನಗು)

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎ. ಆರ್. ಸಿ. ಸ್ಕೀಂನಲ್ಲಿ ಎರಡು ತಿಂಗಳು ಶಿಕ್ಷಣ ಪಡೆದವರಿಗೆ ಒಳ್ಳೆಯ ಬೋಟು, ಸರ್ಕಾರದ ಶಿಕ್ಷಣ ಕೇಂದ್ರಗಳಲ್ಲಿ 6 ತಿಂಗಳು ಶಿಕ್ಷಣ ಪಡೆದವರಿಗೆ ಕಮ್ಮಿ ಅಶ್ವ ಶಕ್ತಿ ಉಳ್ಳ ಬೋಟುಗಳನ್ನು ಕೊಟ್ಟು ತಾರತಮ್ಯ ಮಾಡುತಾ ಇದ್ದಾರೆ. 6 ತಿಂಗಳು ಶಿಕ್ಷಣ ಪಡೆದವರಿಗೂ ಒಳ್ಳೆಯ ಬೋಟುಗಳು ಸಿಕ್ಕುವಂತೆ ಇನ್ನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ರೀತಿ ಶಿಕ್ಷಣದಲ್ಲಿ ವ್ಯತ್ಯಾಸಕ್ಕೆ ಕಾರಣವೇನೆಂದರೆ ಒಂದು ಸ್ಕೀಮ್‌ನಲ್ಲಿ ಎ.ಆರ್.ಸಿ. ಸ್ಕೀಂನವರು ಹಣ ಕೊಡುವುದಕ್ಕೆ ಮುಂದೆ ಬಂದಮೇಲೆ ಸೌತ್ ಕೆನರಾ ಮಾರ್ಕೆಟಿಂಗ್ ಫೆಡರೇಷನ್‌ನವರು ಹೆಚ್ಚಿನ ಶಿಕ್ಷಣ ಪಡೆದಿರತಕ್ಕವರು ಬಹಳ ಕಡಿಮೆ ಜನರು ಇದ್ದರು. ಆ ಸಂದರ್ಭದಲ್ಲಿ ಅಡ್‌ಹಾಕ್ ಬೇಸಿಸ್ ಮೇಲೆ ಎರಡು ತಿಂಗಳ ಕಾಲ ಟ್ರೈನಿಂಗ್‌ಗೆ ವ್ಯವಸ್ಥೆ ಮಾಡಲಾಯಿತು, ಅದಕ್ಕೋಸ್ಕರ ಈ ಒಂದು ವ್ಯತ್ಯಾಸ ಇದೆ ಅಷ್ಟೆ. ಬೋಟುಗಳನ್ನು ಕೊಡುವಾಗ ಅಂತಹ ವ್ಯತ್ಯಾಸವನ್ನೇನೂ ಮಾಡುತ್ತಿಲ್ಲ.

Mr. SPEAKER.—Question Hour is over. ಈಗ ಅಲ್ಪಕಾಲಾವಧಿ ಪ್ರಶ್ನೆ ನಂ. 16.

SHORT NOTICE QUESTIONS AND ANSWERS

Policy of Government in respect of Land Revenue

16. Sri L. SRIKANTAIAH (Nanjangud).—

Will the Minister for revenne be pleased to state :—

(*a*) whether any instructions have been issued by the Government in the matter of collection of Land Revenue and the rates at which the land revenue is collected at present ;

(*b*) whether it has come to the notice of Government that payment of land revenue is withheld under the belief that the Government is abolishing the payment of land revenue ;

(*c*) when will the Government make known its considered policy in this respect ?

Sri H. V. KOUJALGI (Minister for Revenue).—

(*a*) Instructions have been issued in Government Circulars No. RD 578 SST 68 dated 13th September 1968 and No. RD 625 SST 68 dated 30th November 1968 and No. RD 625 SST 68 dated 18th January 1969, copies whereof are placed on the Table of the House*.

(*b*) No.

(*c*) Government has already declared its policy that land revenue is not going to be abolished.

ಶ್ರೀ ಎರ್. ಶ್ರೀಕಂಠಯ್ಯ.—ಕಂದಾಯದ ವಸೂಲಿಯ ಬಗ್ಗೆ ಯಾವ ತಕರಾರೂ ಇರುವುದಿಲ್ಲ ಎಂದು ಇಲ್ಲಿ ತಿಳಿಸಲಾಗಿದೆ. ಹಾಗಿದ್ದಾಗ್ಯೂ ಕೋರ್ಟಿನಲ್ಲಿ ಇಷ್ಟು ರಿಟ್ ಅರ್ಜಿಗಳು ಹೋಗುವುದಕ್ಕೇನು ಕಾರಣ ?

†ಶ್ರೀ ಎಚ್.ವಿ. ಕೌಜಲಗಿ.—ಅವು ಆ ರೀಸೆಟರ್‌ಮೆಂಟಿಗೆ ಮುಂಚಿತವಾಗಿ ಹಾಕಿದ್ದ ಕೇಸುಗಳು. ಇತ್ತೀಚೆಗೆ ಆ ದೋಷವಿಲ್ಲ ಎಂದು ಆ ಕೇಸುಗಳನ್ನೆಲ್ಲಾ ವಾಪಸ್ ಪಡೆದಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಹಿಂದೆ ಮಾಡಿದ ಆ ರೀಕ್ಲಾಸಿಫಿಕೇಷನ್ ತಪ್ಪಾಗಿದೆ ಎಂಬುದನ್ನು ಸರ್ಕಾರದವರು ಹೋದ ಅಧಿವೇಶನದಲ್ಲೇ ಒಪ್ಪಿಕೊಂಡಿದ್ದರೂ ಇನ್ನೂ ಜಿಲ್ಲೆಗಳಲ್ಲರತಕ್ಕ ಜಿಲ್ಲಾಧಿಕಾರಿಗಳು ರೈತರಿಂದ ಬಲಾತ್ಕಾರವಾಗಿ ಹೆಚ್ಚು ಕಂದಾಯವನ್ನು ವಸೂಲ್ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಆ ರೀತಿಯಾಗಿ ಎಲ್ಲಿಯೂ ಹೆಚ್ಚು ಕಂದಾಯವನ್ನು ವಸೂಲ್ಮಾಡಿಲ್ಲ. ಈ ದಿವಸ ಕಂದಾಯವನ್ನು ಹೇಗೆ ವಸೂಲ್ಮಾಡಲಾಗುತ್ತಿದೆ ಎಂಬುದನ್ನು ತಿಳಿಸತಕ್ಕ ನಮ್ಮ ಲರ್‌ಗಳನ್ನು ಸಭೆಯ ಮುಂದಿಡಲಾಗಿದೆ.

Sri D. B. KALMANKAR.—Has not the Hon. Minister assured the House during the last session that a new Bill will be brought before this House in the current session regarding the settlement of land Revenue ?

Sri H. V. KOUJALGI.—Yes, Sir. That has also been mentioned in the Governor's Address.

ಶ್ರೀ ಎಸ್. ಶಿವಪ್ಪ.—ಹಿಂದೆ ಇದೇ ಸಭೆಯಲ್ಲಿ ಮಾನ್ಯ ರೆವೆನ್ಯೂ ಸಚಿವರು ಆ ರೀಕ್ಲಾಸಿಫಿಕೇಶನ್ ಸರಿಯಾಗಿಲ್ಲ. ಅದನ್ನು ರದ್ದುಮಾಡಿ ಅದನ್ನು ಪುನರ್ವಿಮರ್ಶೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡುವುದಾಗಿ ಭರವಸೆಯನ್ನು ಕೊಟ್ಟು ಅದರ ತೀರ್ಮಾನ ಬರುವತನಕ ಹಿಂದೆ ಇದ್ದ ಹಳೇ ಕಂದಾಯವನ್ನೇ ವಸೂಲ್ಮಾಡುವುದಾಗಿ ತಿಳಿಸಿರಲಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಕಾರವೇ ಈಗ ಕಂದಾಯವನ್ನು ವಸೂಲ್ಮಾಡುತ್ತಾರೆ.

ಶ್ರೀ ಎರ್. ಶ್ರೀಕಂಠಯ್ಯ.—ಮಂಡ್ಯಾ ಜಿಲ್ಲೆಯಲ್ಲಿ ಬಲಾತ್ಕಾರವಾಗಿ ಹೆಚ್ಚುದರದಲ್ಲಿ ಕಂದಾಯವನ್ನು ವಸೂಲ್ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಅದು ನನ್ನ ಗಮನಕ್ಕೆ ಬಂದಿಲ್ಲ. ಅಂಥ ಯಾವುದಾದರೂ ನಿದರ್ಶನ ಇದ್ದರೆ ನನ್ನ ಗಮನಕ್ಕೆ ತರಲಿ. ವಿಚಾರ ಮಾಡುತ್ತೇನೆ.

ಶ್ರೀ ಎರ್. ಶ್ರೀಕಂಠಯ್ಯ.—ತಾವು ಇಲ್ಲಿ ಉತ್ತರದಲ್ಲಿ ಸೂಚಿಸಿರತಕ್ಕ ಮೂರು ಸುತ್ತೋಲೆಗಳನ್ನು ಕಳುಹಿಸಿದ್ದರೂ ಅಲ್ಲಿ ರೈತರಿಂದ ಬಲಾತ್ಕಾರವಾಗಿ ಹೆಚ್ಚಿನ ದರದಲ್ಲಿ ಕಂದಾಯ ವಸೂಲ್ಮಾಡುತ್ತಿದ್ದಾರೆ ಅನ್ನುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ವಿ. ಕೌಜಲಗಿ.—ಅಂಥಾದ್ದನ್ನು ನನ್ನ ಗಮನಕ್ಕೆ ತನ್ನಿ ವಿಮರ್ಶೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಕಳೆದ ಮಹಾಜನಾ ವಣಿಗಳು ಆಗುವುದಕ್ಕೆ ಮುನ್ನ ಕಂದಾಯವನ್ನು ಸಂಪೂರ್ಣವಾಗಿ ರದ್ದುಮಾಡುತ್ತೇವೆಂದು ಹೇಳಿ ಅದನ್ನು ಪುನಾ ಜಾರಿಗೆ ತರುವುದಕ್ಕೇನು ಕಾರಣ ?

---

*Copies placed in the Mysore Legislature Library.

ಶ್ರೀ ಎಚ್. ವಿ. ಕೌಜಲಗಿ.—ಹಾಗೆ ಆಗ ಹೇಳಲಾಗಿತ್ತು. ಆದರೆ ಇತ್ತೀಚೆಗೆ ಇದೇ ಮಾನ್ಯ ಸಭೆಯ ಅನೇಕ ಸದಸ್ಯರು ಮೊದಲಿದ್ದ ಹಾಗೆ ಈ ಭೂಕಂದಾಯ ಇರಲೇಬೇಕು ಎಂಬುದಾಗಿ ಅವರು ಒತ್ತಾಯ ಮಾಡಿದುದರಿಂದಲೂ ಮತ್ತು ಸಾರ್ವಜನಿಕರಿಂದ ಸಹಿತ ಕಂದಾಯವನ್ನು ರದ್ದು ಮಾಡಬಾರದೆಂದು ಒತ್ತಾಯಗಳು ಬಂದುದರಿಂದ ಅದನ್ನು ಹಾಗೆ ಮುಂದುವರಿಸರಾಯಿತು.

ಶ್ರೀ ಸಿದ್ದಯ್ಯ ಕಾಶೀಮಠ್.—ಅರ್ಧ ಕಂದಾಯ/ಸಸ್ಪೆನ್‌ಷನ್ ಆಗಿದ್ದ ಕಡೆಗಳಲ್ಲಿ ಹೆಚ್ಚು ಕಂದಾಯ ವಸೂಲ್ಮಾಡಬಾರದೆಂದು ಆದೇಶ ನೀಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅದಕ್ಕೆ ವಿವರಗಳು ರೂಲ್ಸ್‌ನಲ್ಲಿವೆ. ಅದರಂತೆ ಮಾಡುತ್ತಾರೆ.

Dispute in the Sri Ganesha Textile Mills Ltd., Davangere

21. Sri P. VENKATAGIRIYAPPA (Kolar)
Sri L. SRIKANTAIAH (Nanjangud).—

Will the Minister for Law, Labour and Parliamentary Affairs be pleased to state :—

(*a*) whether it is a fact that the management of Sri Ganesha Textile Mills Ltd., Davangere have suspended 14 workers and also issued show cause Notice to 71 Reelers of the Factory on 3rd January 1969 ;

(*b*) whether they are aware that the workers have resorted to Stay-in-strike from 6th January 1969 due to the anti-labour attitude of management and the fear of victimisation ;

(*c*) the steps taken by the Government to save the workers from victimisation and to settle the dispute amicably ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) Yes.

(*c*) The Deputy Commissioner, Chitradurga District has settled the dispute in an amicable manner and the workers have resumed work from 20th January 1969.

ಶ್ರೀ ಪಿ. ವೆಂಕಟಗಿರಿಯಪ್ಪ.—ಇಲ್ಲಿ ಉತ್ತರದಲ್ಲಿ ಅಲ್ಲಿಯ ಡೆಪ್ಯುಟಿ ಕಮಿಷನರು ಸೌಹಾರ್ದಯುತವಾಗಿ ವಿವಾದವನ್ನು ತೀರ್ಮಾನ ಮಾಡಿದ್ದಾರೆ—ಎಲ್ಲರೂ ಕೆಲಸಕ್ಕೆ ಹಿಂದಿರುಗಿದ್ದಾರೆಂದು ಹೇಳಿದೆ. ಹಾಗಾದರೆ ಅಲ್ಲಿ ಆ ಪಾರ್ಟಿಗಳ ಮಧ್ಯೆ ಇನ್ನಾವ ಭಿನ್ನಾಭಿಪ್ರಾಯಗಳೂ ಇರಲಿಲ್ಲವೇ ?

†ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ.